ಇ) ರಾಜ್ಯದಲ್ಲಿ ಪತ್ರಕರ್ತರಿಗೆ ಅನ್ಯಾಯ ಒದಗದಂತೆ ಸರ್ಕಾರವು 'ಪಾಲೀಕರ್ ಏತೀರ್ಪು ಕಾವಲು ಸಮಿತಿ' ರಚಿಸಿದೆಯೇ?

ಈ) ಪತ್ರಕರ್ತರ ಹಾಗೂ ಆಡಳಿತ ವರ್ಗದವರ ಮೇಲೆ ಸರ್ಕಾರವು ನಿಯಮಿತವಾಗಿ ಪರಿಶೀಲಿಸುತ್ತಿದೆಯೆ

ಉ) ಹಾಗಿದ್ದಲ್ಲಿ ಶೋಧಿಸಿದ ಒಟ್ಟು ಸಂಖ್ಯೆ ತಪ್ಪಿತಸ್ಥರು, ಹಾಗೂ ಅಂಥವರ ಮೇಲೆ ಕ್ರಮ ಕೈಗೊಂಡ ಸಂಖ್ಯೆ?

ಶ್ರೀ ಡಿ. ಮಂಜುನಾಥ (ಮಾನ್ಯ ಕಾರ್ಮಿಕ ಸಚಿವರು).—

ಅ) ೫೩ ವೃತ್ತ ಪತ್ರಿಕೆಗಳು.

ಆ) ಏತೀರ್ಪುಗಳನ್ನು ಆಚರಣೆಗೆ ತರಲು ಸತತವಾಗಿ ಆಡಳಿತ ವರ್ಗದವರನ್ನು ಒತ್ತಾಯಿಸಲಾಗುತ್ತಿದೆ.

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹೌದು.

ಉ) ಉದ್ಭವಿಸುವುದಿಲ್ಲ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಕಂದಾಯ ಮಂತ್ರಿಗಳ ಹೆಸರಿನ ಮುಂದೆ ಇರತಕ್ಕಂಥ ಎರಡು ನೋಟಿಫಿಕೇಷನ್‌ಗಳನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಶ್ರೀ ಪಿ ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ಇರುವ ಕಾಗದಪತ್ರಗಳನ್ನು ಸಭೆಯ ಮುಂದೆ ಇಡಲಿಕ್ಕೆ ತಮ್ಮ ಅಪ್ಪಣೆಯನ್ನು ಕೋರುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಪರದಿಯನ್ನೊಪ್ಪಿಸುವುದು

ಶ್ರೀ ಎಸ್.ಕೆ. ಕಾಂತಾ.—ಅಧ್ಯಕ್ಷರೇ, ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಶಿಫಾರಸ್ಸಿನ ಮೇಲೆ ಸರ್ಕಾರದವರು ಕೈಗೊಂಡ ಕ್ರಮದ ಬಗ್ಗೆ, ಸಾರ್ವಜನಿಕ ಉದ್ದಿಮೆಗಳ ಸಮಿತಿಯು ೨೩ನೇ ವರದಿಯನ್ನು ನಾನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಮಂಡಿಸಲಾಗಿದೆ.

ಪ್ರಕಟಣೆ

ಅಧ್ಯಕ್ಷರು.—ರೈಲ್ವೆ ಪೋಲೀಸ್ ಸೂಪರಿಂಟೆಂಡೆಂಟ್, ಬೆಂಗಳೂರು ಇವರಿಂದ ಈ ಕೆಳಕಂಡ ಸಂದೇಶಗಳು ನನಗೆ ಬಂದಿವೆ.

(೧) ವಿಧಾನಸಭಾ ಸದಸ್ಯರಾದ ಶ್ರೀ ಪಂಪಾಪತಿಯವರನ್ನು ಕರ್ನಾಟಕ ಪೋಲೀಸ್ ಕಾಯ್ದೆಯ ೭೧ನೇ ಕಲಮಿನ ಮೇರೆಗೆ ದಾವಣಗೆರೆಯಲ್ಲಿ ದಿನಾಂಕ ೨೬ನೇ ಫೆಬ್ರುವರಿ, ೧೯೮೬ರಂದು ಬೆಳಿಗ್ಗೆ ಬಂಧಿಸಿ ದಾವಣಗೆರೆ ರೈಲ್ವೆ ಪೋಲೀಸ್ ಠಾಣೆಯಲ್ಲಿಟ್ಟುಕೊಂಡಂ ಅದೇ ದಿನ ಬಿಡುಗಡೆ ಮಾಡಲಾಯಿತು.

(೨) ವಿಧಾನ ಸಭಾ ಸದಸ್ಯರಾದ ಶ್ರೀ ಟಿ.ಎಸ್. ಮಣಿಯವರನ್ನು ಕರ್ನಾಟಕ ಪೋಲೀಸ್ ಕಾಯ್ದೆಯ ೭೧ನೇ ಕಲಮಿನ ಮೇರೆಗೆ ಬಂಗಾರಪೇಟೆಯಲ್ಲಿ ದಿನಾಂಕ ೨೬ನೇ ಫೆಬ್ರುವರಿ, ೧೯೭೬ರಂದು ಬಂಧಿಸಿ ಬಂಗಾರಪೇಟೆಯಲ್ಲಿನ ರೈಲ್ವೆ ಪೋಲೀಸ್ ಠಾಣೆಯಲ್ಲಿಟ್ಟುಕೊಂಡು ಅದೇ ದಿನ ಬಿಡುಗಡೆ ಮಾಡಲಾಯಿತು.

ನಿಲುವಳಿ ಸೂಚನೆ

ಭಾರತ್ ಬಂದ್ ಬಗ್ಗೆ (ಅನುಮತಿಗೆ ಮನವಿ)

ಶ್ರೀ ಕೆ. ಹೆಚ್. ಪಾಟೀಲ್.—ಸಭಾಧ್ಯಕ್ಷರೇ, ನಾವು ಈಗಾಗಲೇ ೨೬-೨-೧೯೭೬ನೇ ಇಸವಿಯ ದಿವಸ ಜರುಗಿದಂಥ ರಾಜ್ಯ ಸರ್ಕಾರದ ನೇರ ಬೆಂಬಲದಿಂದ ಭಾರತ್ ಬಂದ್ ಕಾರ್ಯಕ್ರಮದಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯಿಂದ ಹಾಗೂ ಇನ್ನು ಳಿದ ವಿಷಯಗಳನ್ನು ಚರ್ಚಿಸಲಿಕ್ಕೆ ಸದನದಲ್ಲಿ ಚರ್ಚೆ ಮಾಡಲು ಈ ಸೂಚನೆಯನ್ನು ನೀಡುತ್ತೇನೆ. ಈ ಬಗ್ಗೆ ನಿಯಮವನ್ನು ವಿಾರುವುದು ಬೇಡ ಎಂದು ತಾವು ಬಹಳ ಕಳಕಳಿಯಿಂದ ಹೇಳಿದ್ದೀರಿ. ಪ್ರಶ್ನೋತ್ತರ ವೇಳೆಯನಂತರ ಈ ವಿಷಯವನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ. ನಿಜ. ಆದರೆ ಎಲ್ಲಾ ನಿಯಮಗಳನ್ನು ಅನುಸರಿಸಿ ತಮಗೆ ಸಮಾಧಾನವಾಗುವ ರೀತಿಯಲ್ಲಿ ನಿಲುವಳಿ ಸೂಚನೆಯನ್ನು ಈ ಸಭೆ ಸೇರುವುದಕ್ಕೆ ಮೊದಲು ಕೊಟ್ಟಿದ್ದೆ. ಈ ನಿಲುವಳಿ ಸೂಚನೆಗೆ ನಿರ್ದಿಷ್ಟವಾದ ಹಿನ್ನೆಲೆಯನ್ನು ತಾವು ಮತ್ತು ಜನತೆಯು ಅರಿಯುವುದು ಅತ್ಯಂತ ಅವಶ್ಯಕ. ಇದರಲ್ಲಿ ಯಾವುದೇ ರೀತಿಯ ಒಂದು ಬಂದ್ ಆದರೆ ಈ ನಿಲುವಳಿ ಸೂಚನೆಯನ್ನು ತರಲಿಕ್ಕೆ ಇಷ್ಟೆ ಪಟ್ಟದ್ದಲ್ಲ. ಇದರಲ್ಲಿ ವಿಶೇಷವೇನಾಗಿದೆ ಎಂದರೆ, ಸರ್ಕಾರವೇ ಕುಳಿತು ಈ ಬಂದ್‌ನ್ನು ಮಾಡಿಸಿರುವುದು. ಮಾನ್ಯ ಕೃಷ್ಣನ್‌ರವರು ಬಂದ್‌ನ ವಿಷಯವಾಗಿ ಅನೇಕ ಸಲ ಮಾತನಾಡುತ್ತಾರೆ. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ನಾವೇ ಮಾಡಿದ್ದು.

ಶ್ರೀ ಕೆ. ಹೆಚ್. ಪಾಟೀಲ್—ನೀವು ಮಾಡಿದ್ದಕ್ಕೆ ಆಕ್ಷೇಪಣೆ ಇಲ್ಲ. ನಾನು ನಿನ್ನೆ ದಿವಸ ನೋಡಲಿಕ್ಕೆ ಊರಿನ ಕಡೆಗೆ ಹೋದೆ. ಅಗ್ರಿಕಲ್ಚರಲ್ ಯೂನಿವರ್ಸಿಟಿಯ ಹತ್ತಿರ ಹೆಬ್ಬಾಳದಲ್ಲಿ ಪೋಲೀಸ್ ಅಧಿಕಾರಿಗಳು ಪೋಲೀಸ್ ಡ್ರೆಸ್‌ನಿಂದ ಹೊಗಿ ಪೆಟ್ರೋಲ್ ಬಂಕನ್ನು ಬಂದ್ ಮಾಡ್ರಿ ಎಂದು ಹೇಳುತ್ತಿದ್ದರು. ಈ ದೃಷ್ಟಿಯಿಂದ ಮತ್ತು ಇಲ್ಲಿ ಬಂದು ನಾವು ಆಫೀಸಿಗೆ ಬಂದಾಗ ಇಲ್ಲಿ ಅನೇಕ ಕಛೇರಿಗಳು ಮುಚ್ಚಿದ್ದವು. ಕೇಂದ್ರ ಸರ್ಕಾರವೆ ಎಲ್ಲಾ ಕಛೇರಿಗಳು ತೆಗೆದಿದ್ದವು. ಇಲ್ಲಿ ಸರ್ಕಾರ ನೇರವಾದ ಉದ್ದೇಶದಿಂದ ಪ್ರಚೋದನೆ ಮಾಡುವಂಥ ಕಾರ್ಯ ನಡೆದಿರುವುದರಿಂದ ಜನತೆ ಕಂಗಾಲಾಗಿದ್ದಾರೆ. ಶಾಸಕರ ಭವನ ತಮ್ಮ ಕಸ್ಟೋಡಿಯಲ್ಲಿದ್ದರೂ ಎಂ ಎಲ್ ಎ. ಗಳು ಉಪವಾಸ ಬೀಳುವಂಥ ವ್ಯವಸ್ಥೆಗೆ ಬಂತು, ಅದರ ಹೊಣೆ ತಮ್ಮ ಮೇಲೆ ಬರದಿದ್ದರೂ ಸರ್ಕಾರದ ಆದಕ್ಷತೆಯಿಂದ ಇದೆಲ್ಲಾ ನಡೆಯಿತು. ದುರ್ದೈವದಿಂದ ತಮ್ಮ ಹೆಸರನ್ನು ತೆಗೆದುಕೊಳ್ಳುವಂಥದ್ದನ್ನು ಈ ಸರ್ಕಾರ ಮಾಡಿತು. ಆದಕ್ಕೋಸ್ಕರವಾಗಿ ಈ ಚರ್ಚೆ ಅತ್ಯಂತ ಅವಶ್ಯಕ. ಈಗ ಕೇಂದ್ರ ಸರ್ಕಾರದ ದೃಷ್ಟಿಯಲ್ಲಿ ರಾಜ್ಯ ಸರ್ಕಾರದ ದೃಷ್ಟಿಯಲ್ಲಿ ಬೆಲೆಗಳು ಹೆಚ್ಚಾಗಿವೆ. ನೀವೇ ಬೆಲೆಯನ್ನು ಹೆಚ್ಚು ಮಾಡಿ ತಿರುಗಿ ಉಪವಾಸ ಮಾಡುತ್ತೇವೆ ಬಂದ್ ಮಾಡುತ್ತೇವೆ ಎಂದರೆ ಇದು ಯಾವ ಧರ್ಮ? ಕೇಂದ್ರ ಸರ್ಕಾರದ ಮೇಲೆ ಆಗಿದ್ದರೆ ಆ ಮಾತು ಬೇರೆ ಇತ್ತು. ಮಾನ್ಯ ಕೃಷ್ಣನ್‌ರವರು ಈ ಮಾತನ್ನು ಒಪ್ಪುವುದಿಲ್ಲ. ಇದಕ್ಕೆ ಕೇಂದ್ರ ಸರ್ಕಾರವೂ ಕಾರಣವಾಗಿದೆ, ರಾಜ್ಯ ಸರ್ಕಾರವೂ ಕಾರಣವಾಗಿದೆ. ಹೀಗಾಗಿ ನಾನೇ ಮಾಡಿ ನಾನೇ ತಿರುಗಿ ಬಂದ್ ಮಾಡುತ್ತೇನೆ ಎಂದರೆ ಇದೊಂದು ದ್ವಂದ್ವ ಯುದ್ಧವಾಗುತ್ತದೆ ಯಾವ ಜನರು ಇಪತ್ತು ಆಡಳಿತವನ್ನು ವಹಿಸಿಕೊಂಡು ಸಾಮಾನ್ಯ ಜನತೆಗೆ ನ್ಯಾಯ ರಕ್ಷಣೆ ಕೊಡಬೇಕೋ ಅಂಥವರು ಈ ಬಂದನ್ನು ಮಾಡಲಿಕ್ಕೆ ಹತ್ತಿದರೆ ನಾಳೆ ಈ ಬಂದ್ ಯಾವ ಮಟ್ಟಿಗೆ ವರಂಟಿಬತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಅನೇಕ ರಸ್ತೆಗಳಲ್ಲಿ ನೋಡಿದ್ದೇವೆ. ಆದರೆ ಎಲ್ಲೆಲ್ಲಿ ಸರ್ಕಾರದ ವರ್ಚಸ್ಸು ಇದೆ ಅವರು ಮಾತ್ರ ಬಂದ್ ಮಾಡಿದರು. ಇದೇನಾದರೂ ವಿಕೋಪಕ್ಕೆ ಹೋಗಿದ್ದರೆ ಲಾ ಅಂಡ್ ಆರ್ಡರ್ ಸಿಚುಯೇಷನ್ ತಲೆಯೆತ್ತಿ ಸಜ್ಜನರಿಗೆ ತೊಂದರೆಯಾಗುತ್ತಿತ್ತು. ಕ್ರಮಬದ್ಧವಾದಂತಹ ಈ ಸದನ ಇಂಥ ವಿಷಯವನ್ನು ವಿಚಾರ ಮಾಡುವುದು ಅತ್ಯಂತ ಅವಶ್ಯಕವಾಗಿದೆ. ಉಳಿದ ರೀತಿಯಲ್ಲಿ ನಿಮಗೆ ತೊಂದರೆ ಕೊಡಬೇಕೆಂದು ನಾನು ಇಚ್ಛಿ